ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/55/2015-16. ದಿನಾಂಕ:21-06-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>1)ಪೂಜಾರ ಸೂರಪ್ಪ ತಂದೆ ಪೂಜಾರ ದೊಡ್ಡಸೂರಪ್ಪ<br>2)ನೀರಗಂಟಿ ಸೂರಪ್ಪ ತಂದೆ ಲೇಟ್ ರಾಜಪ್ಪ<br>ರಾಮದುರ್ಗ ಗ್ರಾಮ<br>ಕೂಡ್ಲಿಗಿ ತಾಲೂಕು</td><td>ಎನ್.ಪಾಲಮ್ಮ ಗಂಡ ಲೇಟ್ ರಾಜಪ್ಪ<br>ರಾಮದುರ್ಗ ಗ್ರಾಮ<br>ಕೂಡ್ಲಿಗಿ ತಾಲೂಕು</td></tr>
<tr><td colspan="2">ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 39ಬಿ. ವಿಸ್ತೀರ್ಣ 3-97. ಎಕ್ರೆ ಜಮೀನನ್ನು ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 39ಬಿ. ವಿಸ್ತೀರ್ಣ 3-97. ಎಕ್ರೆ ಜಮೀನನ್ನು ಸದರಿ ಗ್ರಾಮದ ನೀರಗಂಟಿ ಸೂರಪ್ಪ ತಂದೆ ಲೇಟ್ ರಾಜಪ್ಪ ಇವರಿಂದ ಸದರಿ ಗ್ರಾಮದ ಪೂಜಾರ ಸೂರಪ್ಪ ತಂದೆ ಪೂಜಾರ ದೊಡ್ಡಸೂರಪ್ಪ ಇವರು ದಿನಾಂಕ 13-07-2015 ರ ಡಾಕ್ಯುಮೆಂಟ್ ನಂಬರ್: 1165/2015-16. ಪ್ರಕಾರ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಮದುರ್ಗ ಇವರು ನಮೂನೆ-21 ನೋಟಿಸನ್ನು ದಿನಾಂಕ 29-07-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಎನ್.ಪಾಲಮ್ಮ ಗಂಡ ಲೇಟ್ ರಾಜಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 04/2015-16. ದಿನಾಂಕ 30-09-2015. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 05-04-2016 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ರಾಮದುರ್ಗ ಗ್ರಾಮದ ಸನಂ 39ಬಿ. ವಿಸ್ತೀರ್ಣ 3-97. ಎಕ್ರೆ ಜಮೀನನ್ನು ನಮ್ಮ ಅಜ್ಜನವರಾದ ನೀರಗಂಟಿ ಸೂರಪ್ಪ ತಂದೆ ಲೇಟ್ ರಾಜಪ್ಪ ಇವರು ನನ್ನ ಮೇಲಿನ ಪ್ರೀತಿ.ವಿಶ್ವಾಸದಿಂದ ದಿನಾಂಕ 13-07-2015 ರ ಡಾಕ್ಯುಮೆಂಟ್ ನಂಬರ್: 1165/2015-16 ರ ಪ್ರಕಾರ ನನ್ನ ಹೆಸರಲ್ಲಿ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಕಾರಣ ಸದರಿ ದಾನ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ನಮ್ಮ ಪಿತ್ರಾರ್ಜಿತ ಆಸ್ತೀಯಾಗಿದ್ದು ಸದರಿ ಜಮೀನಿನಲ್ಲಿ ನನಗೆ ಪಾಲು ಬರಬೇಕಾಗಿದ್ದು ನನ್ನ ದೊಡ್ಡಪ್ಪನಾದ ನೀರಗಂಟಿ ಸೂರಪ್ಪನು ತನ್ನ ಮಗಳ ಮಗನಾದ ಪೂಜಾರ ಸೂರಪ್ಪ ಇವರಿಗೆ ದಾನ ಪತ್ರ ಬರೆಯಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಸದರಿ ದಾನ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ತಕರಾರುದಾರರು ತಮ್ಮ ತಕರಾರು ಅರ್ಜಿಯನ್ನು ವಾಪಸ್ಸು ಪಡೆದಿರುವುದಾಗಿ ಹೇಳಿಕೆ ನೀಡಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 39ಬಿ. ವಿಸ್ತೀರ್ಣ 3-97. ಎಕ್ರೆ ಜಮೀನನ್ನು ದಿನಾಂಕ 13-07-2015 ರ ಡಾಕ್ಯುಮೆಂಟ್ ನಂಬರ್: 1165/2015-16. ರ ದಾನ ಪತ್ರ ಪ್ರಕಾರ ಅರ್ಜಿದಾರರಾದ ಪೂಜಾರ ಸೂರಪ್ಪ ತಂದೆ ಪೂಜಾರ ದೊಡ್ಡ ಸೂರಪ್ಪ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪವಿಭಾಗಾಧಿಕಾರಿ
ನಾಡಕಚೇರಿ ಹೊಸಪೇಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಪೂಜಾರ ಸೂರಪ್ಪ ತಂದೆ ಪೂಜಾರ ದೊಡ್ಡಸೂರಪ್ಪ. ನೀರಗಂಟಿ ಸೂರಪ್ಪ ತಂದೆ ಲೇಟ್ ರಾಜಪ್ಪ. ರಾಮದುರ್ಗ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾ ಎನ್.ಪಾಲಮ್ಮ ಗಂಡ ಲೇಟ್ ರಾಜಪ್ಪ ರಾಮದುರ್ಗ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.